2) ಪಿರಿಯಾಪಟ್ಟಣತಾಲ್ಲೂಕಿನ ವ್ಯಾಪ್ತಿಯಲ್ಲಿನ ಎಷ್ಟು ಗ್ರಾಮಗಳಲ್ಲಿ ಎಷ್ಟು ಕಂಬಗಳು ಬದಲಿಸಬೇಕೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ಇದರಲ್ಲಿ ಎಷ್ಟು ಆತ್ಯರ್ಥ ಪಡಿಸಲಾಗಿದೆ;

3) ಟ್ರಾನ್ಸ್‌ಫಾರ್ಮರ್‌ಗಳನ್ನು ಬದಲಾವಣೆಗೆ ತಿಳಿಸಲಾಗುವ ಸ್ಥಳ ಎಷ್ಟು; ಈ ಬಗ್ಗೆ ತೆಗೆದುಕೊಂಡ ಕ್ರಮವೇನು;

4) ಈ ಕಾಮಗಾರಿಗಳಲ್ಲಿ ವಿಳಂಬವಾಗುತ್ತಿದ್ದು ಇದಕ್ಕೆ ಕಾರಣವಾದ ವಿದ್ಯುತ್ ನಿಗಮದ ಮೇಲೆ ಕಟ್ಟು ನಿಟ್ಟಿನ ಕ್ರಮ ಜರುಗಿಸಲಾಗುವುದೆ?

ಶ್ರೀ ವೀರಕುಮಾರ್ ಆ. ಪಾಟೀಲ್ (ಇಂಧನ ರಾಜ್ಯ ಸಚಿವರು)

1) ಹೌದು, ಬಂದಿದೆ.

2) ಪಿರಿಯಾಪಟ್ಟಣ ತಾಲ್ಲೂಕಿನ ವ್ಯಾಪ್ತಿಯಲ್ಲಿ 3 ಗ್ರಾಮಗಳಲ್ಲಿ ಒಟ್ಟು 15 ಕಂಬಗಳನ್ನು ಬದಲಾಯಿಸಲು ಗುರುತಿಸಲಾಗಿದ್ದು, 13 ಕಂಬಗಳನ್ನು ಬದಲಾಯಿಸಲಾಗಿದೆ.

3) ಟ್ರಾನ್ಸ್‌ಫಾರ್ಮರ್‌ಗಳನ್ನು ಸ್ಥಳಾಂತರಿಸಲು 2 ಸ್ಥಳಗಳನ್ನು ಗುರುತಿಸಲಾಗಿದ್ದು, ಸ್ಥಳಾಂತರಿಸುವಿಕೆಗೆ ಸಂಬಂಧಿಸಿದಂತೆ ಅಂದಾಜು ಪಟ್ಟಿಗಳ ತಯಾರಿಕೆಗೆ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

4) ಈ ಕಾಮಗಾರಿಗಳನ್ನು ನಿಗಮದ ನಿಯಮದಂತೆ ಪೂರ್ಣಗೊಳಿಸಲು ವಿಳಂಬ ಮಾಡದೇ, ಆದ್ಯತೆಯ ಮೇಲೆ ಕ್ರಮ ಕೈಗೊಳ್ಳಲಾಗುತ್ತಿದೆ.

ಉಪಯೋಗಿಸದೇ ಇರುವ ಕುಡಿಯುವ ನೀರಿನ ಯೋಜನೆಗೆ ಅನಗತ್ಯವಾಗಿ ಕೆ.ಪಿ.ಟಿ.ಸಿ.ಎಲ್ ರವರು ಬಿಲ್ ಕಳುಹಿಸುತ್ತಿರುವುದು:

29 (270) ಶ್ರೀ ಬಸವರಾಜು ಹೆಚ್.ಸಿ. (ಪಿರಿಯಾಪಟ್ಟಣ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ಉಪಯೋಗಿಸದೇ ಇರುವ ಕುಡಿಯುವ ನೀರಿನ ಯೋಜನೆಗಳಿಗೆ ಅನಗತ್ಯವಾಗಿ ಕೆ.ಪಿ.ಟಿ.ಸಿ.ಎಲ್. ರವರು ಬಿಲ್ ಕಳುಹಿಸಿ ರಾಜ್ಯದ ಎಲ್ಲಾ ಪಂಚಾಯತ್ ಮತಿಯಿಂದ ಹಣ ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

2) ಇಂತಹ ಎಷ್ಟು ಪ್ರಕರಣಗಳಿಗೆ ಹಣ ಪಡೆಯಲಾಗುತ್ತಿದೆ, ತಾಲ್ಲೂಕುವಾರು ಮಾಹಿತಿ ನೀಡುವುದು;

3) ಇದರಿಂದಾಗಿ ಗ್ರಾಮ ಪಂಚಾಯಿತಿಗೆ ಹಣ ತೊಂದರೆಯಾಗಲಿದ್ದು ಇದನ್ನು ತಡೆಗಟ್ಟಲು ಸರ್ಕಾರ ಕೈಗೊಳ್ಳುವ ಕ್ರಮವೇನು?

ಶ್ರೀ ವೀರಕುಮಾರ್ ಅ. ಪಾಟೀಲ್ (ಇಂಧನ ರಾಜ್ಯ ಸಚಿವರು)

1) ಕುಡಿಯುವ ನೀರಿನ ಯೋಜನೆಗಳಿಗೆ ವಿದ್ಯುತ್ ನೀಡುವ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿಯವರು ವಿದ್ಯುತ್ ಸರಬರಾಜಿಗೆ ಸಂಬಂಧಿಸಿದಂತೆ ಕರಾರು ಪತ್ರವನ್ನು ನೀಡಿರುತ್ತಾರೆ. ಈ ಕರಾರು ಪತ್ರದ ಪ್ರಕಾರ ನಿರ್ದಿಷ್ಟ ಅವಧಿಯವರೆಗೆ ಕನಿಷ್ಟ ಶುಲ್ಕವನ್ನು ಗ್ರಾಮ ಪಂಚಾಯಿತಿಯು ನೀಡಬೇಕಾಗುತ್ತದೆ. ಒಂದು ವೇಳೆ ಕುಡಿಯುವ ನೀರಿನ ಯೋಜನೆಯು ವಿಫಲಗೊಂಡು ವಿದ್ಯುತ್ ಉಪಯೋಗಿಸದೇ ಇರುವ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿಯವರು ಶಾಶ್ವತವಾಗಿ ವಿದ್ಯುತ್ ಬೇಡವೆಂದು ನಿಗಮಕ್ಕೆ ತಿಳಿಸಿದಲ್ಲಿ ಕಾನೂನು ರೀತಿ ವಿದ್ಯುತ್ ಸರಬರಾಜು ನಿಬಂಧನೆಗಳ ಪ್ರಕಾರ ಕರಾರು ಪತ್ರವನ್ನು ರದ್ದು ಪಡಿಸಲು ನಿಗಮವು ಕ್ರಮ ಕೈಗೊಳ್ಳುತ್ತದೆ. ಹೀಗೆ ವಿದ್ಯುತ್ ಸಂಪರ್ಕ ತೆಗೆದು ಹಾಕಿದ ಸ್ಥಾವರಗಳಿಗೆ ಒಂದು ವೇಳೆ ಪುನರ್ ಸಂಪರ್ಕ ಬೇಕಾದಲ್ಲಿ ಗ್ರಾಮ ಪಂಚಾಯಿತಿಯವರು ನಿಯಮಾನುಸಾರ ಹೊಸದಾಗಿ ಸಂಪರ್ಕ ಪಡೆಯಬೇಕಾಗುತ್ತದೆ. ಒಂದು ವೇಳೆ ಕರಾರು ಪತ್ರವನ್ನು ರದ್ದು ಪಡಿಸಲು ಗ್ರಾಮ ಪಂಚಾಯಿತಿಯವರಿಂದ ಕೋರಿಕೆಗಳು ಬರದೇ ಇದ್ದಲ್ಲಿ ವಿದ್ಯುತ್ ಸರಬರಾಜು ನಿಯಮಾವಳಿಗಳ ಪ್ರಕಾರ ಕನಿಷ್ಟ ಶುಲ್ಕವನ್ನು ಗ್ರಾಮ ಪಂಚಾಯ್ತಿಯವರು ನಿಗಮಕ್ಕೆ ಪಾವತಿಸಬೇಕಾಗಿರುತ್ತದೆ.

2) -ಅದೇ-

3) -ಅದೇ-

ನಾಗಮಂಗಲ ತಾಲ್ಲೂಕಿನಲ್ಲಿ ದುಸ್ಥಿತಿಯಲ್ಲಿರುವ ದೇವಸ್ಥಾನಗಳ ಜೀರ್ಣೋದ್ಧಾರ:

32 (204) ಶ್ರೀ ಚೆಲುವರಾಯಸ್ವಾಮಿ ಎಸ್. (ನಾಗಮಂಗಲ): ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ನಾಗಮಂಗಲ ತಾಲ್ಲೂಕಿನ 2 ವರ್ಷಗಳಿಂದ ಯಾವುದೇ ದೇವಸ್ಥಾನಗಳಿಗೆ ಸರಣ ಬಿಡುಗಡೆಯಾಗದ ಇರುವುದರ ಬಗ್ಗೆ ಸರ್ಕಾರದ ಕ್ರಮವೇನು ಹಾಗೂ ಮಳೆಯಿಂದ ಹಾನಿಯಾಗಿರುವ ಹಾಗೂ ಸಂಪೂರ್ಣ ದುಸ್ಥಿತಿಯಲ್ಲಿರುವ ದೇವಾಲಯದ ಜೀರ್ಣೋದ್ಧಾರ ಬಗ್ಗೆ ಸರ್ಕಾರದ ಕ್ರಮವೇನು;

2) ನಮ್ಮ ರಾಜ್ಯದಲ್ಲಿ, ಧಾರ್ಮಿಕ, ಐತಿಹಾಸಿಕ ಕಲೆ ಹಾಗೂ ಭವ್ಯ ಪರಂಪರೆ ಇರತಕ್ಕಂತಹ ಎಷ್ಟು ದೇವಸ್ಥಾನಗಳು ದುರಸ್ಥಿಯಾಗಿರುತ್ತವೆ ಹಾಗೂ ಹಾಳಿ ದುರಸ್ಥಿಯಾಗಬೇಕಿರುವ ದೇವಸ್ಥಾನಗಳ ಸಂಖ್ಯೆ ಹಾಗೂ ಇವರ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮವೇನು?

ಶ್ರೀ ಬಾಬುರಾವ್ ಬಸವಣ್ಣಪ್ಪ ಚಿಂಚನೂರು (ಮುಜರಾಯಿ ರಾಜ್ಯ ಸಚಿವರು)

1) ನಾಗಮಂಗಲ ತಾಲ್ಲೂಕಿಗೆ ಸಂಬಂಧಿಸಿದ ದೇವಾಲಯಗಳ ಜೀರ್ಣೋದ್ಧಾರಕ್ಕಾಗಿ 1998-99ನೇ ಸಾಲಿನಲ್ಲಿ 29 ಸಂಸ್ಥೆಗಳಿಗೂ ಮತ್ತು 99-2000ರಲ್ಲಿ 3 ಸಂಸ್ಥೆಗಳಿಗೂ ಸರಣ ಮಂಜೂರು ಮಾಡಲಾಗಿದೆ.